ದಿನಾಂಕ 25-6-2019 ರಂದು ಬೆಳಿಗ್ಗೆ 11.00 ಗಂಟೆಗೆ ಕುಲಪತಿಯವರ ಸಭಾಂಗಣ, ಕೃವಿವಿ, ರಾಯಚೂರಿನಲ್ಲಿ ಜರುಗಿದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 40ನೇ (ವಿಶೇಷ) ಸಭೆಯ ನಡುವಳಿಗಳು:

ಉಪಸ್ಥಿತರು:

| | | |
|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು |
| 2. | ಡಾ. ಶಿವರಾಜ ಪಾಟೀಲ್, ವಿಧಾನ ಸಭಾ ಸದಸ್ಯರು, ರಾಯಚೂರು | ಸದಸ್ಯರು |
| 3. | ಶ್ರೀಮತಿ ಹೇಮಾವತಿ ಲಂಕೇಶ, ಗಂಗಾವತಿ ಕೊಪ್ಪಳ ಜಿಲ್ಲೆ | ಸದಸ್ಯರು |
| 4. | ಶ್ರೀ ಅಮರೇಶ ಬಲ್ಲಿದವ, ದೇವದುರ್ಗ, ರಾಯಚೂರು ಜಿಲ್ಲೆ | ಸದಸ್ಯರು |
| 5. | ಶ್ರೀ ಸಿದ್ದಪ್ಪ ಭಂಡಾರಿ, ಕಲಮಲ, ರಾಯಚೂರು ಜಿಲ್ಲೆ | ಸದಸ್ಯರು |
| 6. | ಶ್ರೀ ವೀರನಗೌಡ ಪರಸರೆಡ್ಡಿ, ನಾಲವಾರ, ಚಿತ್ತಾಪುರ, ಕಲಬುರಗಿ ಜಿಲ್ಲೆ | ಸದಸ್ಯರು |
| 7. | ಡಾ. ಎಂ.ಜಿ. ಪಾಟೀಲ್, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಸ್ವಾಗತ ಕೋರಿದರು.

ತದನಂತರ, ಕೋರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| ಐಟಂ-1 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಒಂಭತ್ತನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳ ಪ್ರದಾನ ಮಾಡಲು ಅನುಮೋದನೆ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಒಂಭತ್ತನೆಯ ಘಟಿಕೋತ್ಸವದಲ್ಲಿ ಸ್ನಾತಕ ಪದವಿಗಳನ್ನು ಪಡೆಯುವ ಅರ್ಹ ಅಭ್ಯರ್ಥಿಗಳ ಯಾದಿಯನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಪರಿಶೀಲಿಸಿ ಶಿಫಾರಸ್ಸು ಮಾಡಿದ್ದನ್ನು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009 ರ ಕಲಂ 13(2)(viii) ರನ್ವಯ ಸ್ನಾತಕ ಪದವಿಗಳನ್ನು ಪ್ರದಾನ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>(ಕ್ರಮ : ಕುಲಸಚಿವರು) |
| ಐಟಂ-2 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಒಂಭತ್ತನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳ ಪ್ರದಾನ ಮಾಡಲು ಅನುಮೋದನೆ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಒಂಭತ್ತನೆಯ ಘಟಿಕೋತ್ಸವದಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆಯುವ ಅರ್ಹ ಅಭ್ಯರ್ಥಿಗಳ ಯಾದಿಯನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಪರಿಶೀಲಿಸಿ ಶಿಫಾರಸ್ಸು ಮಾಡಿದ್ದನ್ನು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 13(2)(viii) ರನ್ವಯ ಸ್ನಾತಕೋತ್ತರ ಪದವಿಗಳನ್ನು ಪ್ರದಾನ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>(ಕ್ರಮ : ಕುಲಸಚಿವರು) |
| ಐಟಂ-3 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಒಂಭತ್ತನೇಯ ಘಟಿಕೋತ್ಸವದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಬಂಗಾರದ ಪದಕ ಮತ್ತು ನಗದು ಬಹುಮಾನ/ಬಹುಮಾನಗಳನ್ನು ನೀಡಲು ಅನುಮೋದನೆ ಕುರಿತು** |

| | |
|---|---|
| ಐಟಂ–6 | **ಸಿ.ಎ.ಎಸ್. 2006 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ / ವಿಜ್ಞಾನಿಗಳ ಪದೋನ್ನತಿಯ ಕುರಿತು ಅನುಮೋದನೆ ನೀಡುವುದು**<br><br>**ಠರಾವು:**<br>ಕೃವಿವಿ ಆದೇಶ ಸಂ. ಕುಸ/ಕೃವಿವಿರಾ/ವ್ಯೆ.ಮಂ.ಸಭೆ–38/2018–19 ದಿನಾಂಕ 24–6–2019 ರನ್ವಯ ಸಿ.ಎ.ಎಸ್.–2006 ಅಡಿ ಎ.ಜಿ.ಪಿ. ರೂ. 6000 ರಿಂದ 7000 ಕ್ಕೆ (05 ಶಿಕ್ಷಕರುಗಳಿಗೆ), ಎ.ಜಿ.ಪಿ. ರೂ. 7000 ರಿಂದ 8000 ಕ್ಕೆ (03 ಶಿಕ್ಷಕರುಗಳಿಗೆ), ಎ.ಜಿ.ಪಿ. ರೂ. 8000 ರಿಂದ 9000 ಕ್ಕೆ (05 ಶಿಕ್ಷಕರುಗಳಿಗೆ) ಹಾಗೂ ಎ.ಜಿ.ಪಿ. ರೂ. 9000 ರಿಂದ 10000 ಕ್ಕೆ (01 ಶಿಕ್ಷಕರಿಗೆ) ಯಾದಿಯಲ್ಲಿ ನಮೂದಿಸಿರುವಂತೆ ಅರ್ಹ ಶಿಕ್ಷಕರುಗಳಿಗೆ ಅವರುಗಳು ಅರ್ಹತೆ ಹೊಂದಿದ ದಿನಾಂಕದಿಂದ ಅನ್ವಯವಾಗುವಂತೆ ಮುಂಬಡ್ತಿ ಆದೇಶಗಳನ್ನು ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಯು.ಜಿ.ಸಿ. ಯ ದಿನಾಂಕ 16–10–2018 ರ ಸಾರ್ವಜನಿಕ ನೋಟೀಸ್ ಸಂ.2 ((16-002-ps)-Pt-Fi-II) ರಲ್ಲಿ ನಿಗದಿತ ಅವಧಿಯಲ್ಲಿ ಕನಿಷ್ಠ ತರಬೇತಿಗಳನ್ನು ಪಡೆದಿರಬೇಕಾದ ವಿಷಯಕ್ಕೆ ವಿನಾಯತಿ ನೀಡಿದ್ದರಿಂದ ಡಾ. ಜಿ.ಸಿ. ಶೇಖರ, ಡಾ. ಸಿ.ಎಂ. ಕಾಲಿಭಾವಿ ಮತ್ತು ಡಾ. ಮಚೇಂದ್ರನಾಥ ಇವರುಗಳ ಪದೋನ್ನತಿಗಳನ್ನು ಪರಿಗಣಿಸಿ ಮಂಡಳಿಯು ಅನುಮೋದನೆ ನೀಡಿರುತ್ತದೆ.<br><br>ಮುಂದುವರೆದು, ಶ್ರೀ. ಎಂ.ಬಿ. ಅಗ್ನಾಳ ಅವರು ನಿಗದಿತ ಅವಧಿಯಲ್ಲಿ ಅವಶ್ಯಕವಿರುವ ಸಂಶೋಧನಾ ಪ್ರಬಂಧಗಳನ್ನು ಹೊಂದಿರದೇ ಇರುವುದರಿಂದ ಹಾಗೂ ಡಾ. ಪಿ.ಎಸ್. ಕಾಣನ್ನವರ್ ಇವರ ಹಿಂದಿನ ಸೇವೆಯನ್ನು ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿರುವ ವಿಷಯವು ರಿಟ್ ಪೆಟಿಶನ್ ಸಂ. 205775/2016 ರಲ್ಲಿ ನ್ಯಾಯಾಲಯದಲ್ಲಿ ಇರುವುದರಿಂದ, ಸದರಿಯವರುಗಳ ಪದೋನ್ನತಿಯನ್ನು ಮಂಡಳಿಯು ಪರಿಗಣಿಸಿರುವುದಿಲ್ಲ.<br><br>**(ಕ್ರಮ : ಕುಲಸಚಿವರು)** |
| ಐಟಂ–7 | **ಶ್ರೀ ಎಸ್.ವೈ. ಶತರೆಡ್ಡಿ, ಇವರನ್ನು ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿ ಹುದ್ದೆಯಿಂದ ಉಪ–ಹಣಕಾಸು ನಿಯಂತ್ರಣಾಧಿಕಾರಿ ಹುದ್ದೆಗೆ ಮುಂಬಡ್ತಿ ನೀಡಲು ಅನುಮೋದನೆ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಸದರಿ ಪ್ರಸ್ತಾವನೆಗೆ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿತು ಹಾಗೂ ಶ್ರೀ ಎಸ್.ವೈ. ಶತರೆಡ್ಡಿ, ಇವರಿಗೆ ಉಪ–ಹಣಕಾಸು ನಿಯಂತ್ರಣಾಧಿಕಾರಿ ಹುದ್ದೆಗೆ ಪದೋನ್ನತಿ ಆದೇಶವನ್ನು ನೀಡಲು ಠರಾಯಿಸಲಾಯಿತು.<br><br>**(ಕ್ರಮ : ಕುಲಸಚಿವರು)** |
| ಐಟಂ–8 | **ಶ್ರೀ ಶಿವಕುಮಾರ ಎಸ್., ಇವರನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ (ಸಿವಿಲ್) ಹುದ್ದೆಯಿಂದ ಕಾರ್ಯನಿರ್ವಾಹಕ ಅಭಿಯಂತರರ (ಸಿವಿಲ್) ಹುದ್ದೆಗೆ ಮುಂಬಡ್ತಿ ನೀಡಲು ಅನುಮೋದನೆ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಸದರಿ ಪ್ರಸ್ತಾವನೆಗೆ ಮಂಡಳಿಯು ಅನುಮೋದನೆ ನೀಡಿತು ಹಾಗೂ ಸ್ಥಳಿಯೇತರ ಅಭ್ಯರ್ಥಿಯನ್ನು ಸ್ಥಳೀಯ ವೃಂದದಲ್ಲಿ ಖಾಲಿ ಇರುವ ಹುದ್ದೆಗೆ ಪದೋನ್ನತಿ ನೀಡುವ ವಿಷಯದ ಕುರಿತು ಹೈದ್ರಾಬಾದ–ಕರ್ನಾಟಕ ವಿಶೇಷ ಕೋಶದಿಂದ ಸ್ಪಷ್ಟೀಕರಣ ಪಡೆದ ನಂತರ ಪದೋನ್ನತಿ ಆದೇಶವನ್ನು ಹೊರಡಿಸಲು ಠರಾಯಿಸಲಾಯಿತು.<br><br>**(ಕ್ರಮ : ಕುಲಸಚಿವರು)** |

| | |
|---|---|
| | ಬಳಕೆದಾರರಿಗಾಗಿ ಹೊಸ Android Application ತಂತ್ರಜ್ಞಾನ ಜೋಡಣೆಯ ಯೋಜನೆಗೆ ಮಂಡಳಿಯು ಅನುಮೋದನೆ ನೀಡುತ್ತಾ, ಈಗಾಗಲೇ ಸದರಿ ಯೋಜನೆಯನ್ನು ಕಾರ್ಯಗತಗೊಳಿಸಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಸಮರ್ಥನೆ ನೀಡಿತು.<br><br>**ಆ) ಇ-ಸ್ಯಾಪ್ ತಂತ್ರಜ್ಞಾನದಲ್ಲಿ "Integrated Report System-Realm Model" ತಂತ್ರಾಂಶದ ಜೋಡಣೆ**<br><br>2018-19 ನೇ ಸಾಲಿಗಾಗಿ ರೂ. 14,04,466/- ಗಳ ಅನುದಾನದ ಇ-ಸ್ಯಾಪ್ ತಂತ್ರಜ್ಞಾನದಲ್ಲಿ "Integrated Report System-Realm Model" ತಂತ್ರಾಂಶದ ಜೋಡಣೆಯ ಯೋಜನೆಗೆ ಮಂಡಳಿಯು ಅನುಮೋದನೆ ನೀಡುತ್ತಾ, ಈಗಾಗಲೇ ಸದರಿ ಯೋಜನೆಯನ್ನು ಕಾರ್ಯಗತಗೊಳಿಸಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಸಮರ್ಥನೆ ನೀಡಿತು.<br><br>**ಇ) ಇ-ಸ್ಯಾಪ್ ತಂತ್ರಾಂಶವನ್ನು ಕೆ.ವಿ.ಕೆ. ವಿಜ್ಞಾನಿಗಳಿಗೆ, ರಾಯಚೂರು ಕೃಷಿ ಇಲಾಖೆಯ ಅಧಿಕಾರಿಗಳಿಗೆ, ಕೃವಿ.ವಿ. ರಾಯಚೂರಿನ ವಿಜ್ಞಾನಿ ಹಾಗೂ ಇ ಸ್ಯಾಪ್ ತಂಡದವರಿಗೆ (146 ಬಳಕೆದಾರರಿಗೆ) ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಬಳಸಲು ಅನುಕೂಲವಾಗುವಂತೆ ತಂತ್ರಾಂಶ ನಿರ್ವಹಣೆ:**<br><br>2018-19 ನೇ ಸಾಲಿಗಾಗಿ ಈಗಾಗಲೇ ರೂ. 26,83,320/- ಗಳ ಅನುದಾನದ ಇ-ಸ್ಯಾಪ್ ತಂತ್ರಾಂಶವನ್ನು ಕೆ.ವಿ.ಕೆ. ವಿಜ್ಞಾನಿಗಳಿಗೆ, ರಾಯಚೂರು ಕೃಷಿ ಇಲಾಖೆಯ ಅಧಿಕಾರಿಗಳಿಗೆ, ಕೃ.ವಿ.ವಿ. ರಾಯಚೂರಿನ ವಿಜ್ಞಾನಿ ಹಾಗೂ ಇ ಸ್ಯಾಪ್ ತಂಡದವರಿಗೆ (146 ಬಳಕೆದಾರರಿಗೆ) ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಬಳಸಲು ಅನುಕೂಲವಾಗುವಂತೆ ತಂತ್ರಾಂಶ ನಿರ್ವಹಣೆಯ ಯೋಜನೆಗೆ ಮಂಡಳಿಯು ಅನುಮೋದನೆ ನೀಡುತ್ತಾ, ಈಗಾಗಲೇ ಸದರಿ ಯೋಜನೆಯನ್ನು ಕಾರ್ಯಗತಗೊಳಿಸಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಸಮರ್ಥನೆ ನೀಡಿತು.<br><br>**ಈ) ಇ-ಸ್ಯಾಪ್ ತಂತ್ರಾಂಶವನ್ನು ಕೃಷಿ ಇಲಾಖೆಯ ಅಧಿಕಾರಿಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ, ರೈತ ಉತ್ಪಾದಕಾ ಸಂಘದ ಕ್ಷೇತ್ರ ಬಳಕೆದಾರರಿಗೆ ಕೃಷಿ ಬೆಳೆಗಳಲ್ಲಿ ಬಳಸಲು ಅನುಕೂಲವಾಗುವಂತೆ ತಂತ್ರಾಂಶ ನಿರ್ವಹಣೆ:**<br><br>ಇ-ಸ್ಯಾಪ್ ತಂತ್ರಾಂಶವನ್ನು ಕೃಷಿ ಇಲಾಖೆಯ ಅಧಿಕಾರಿಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ, ರೈತ ಉತ್ಪಾದಕಾ ಸಂಘದ ಕ್ಷೇತ್ರ ಬಳಕೆದಾರರಿಗೆ ಕೃಷಿ ಬೆಳೆಗಳಲ್ಲಿ ಬಳಸಲು ಅನುಕೂಲವಾಗುವಂತೆ ತಂತ್ರಾಂಶ ನಿರ್ವಹಣೆಗಾಗಿ 2019-20 ನೇ ಸಾಲಿಗಾಗಿ ರೂ. 69,00,000/- ಗಳು ತಗಲುವ ವೆಚ್ಚದ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>**ಉ) ಇ ಸ್ಯಾಪ್ ತಂತ್ರಾಂಶವನ್ನು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ, ರೈತ ಉತ್ಪಾದಕಾ ಸಂಘದ ಕ್ಷೇತ್ರ ಬಳಕೆದಾರರಿಗೆ ತೋಟಗಾರಿಕೆ ಬೆಳೆಗಳಲ್ಲಿ ಬಳಸಲು ಅನುಕೂಲವಾಗುವಂತೆ ತಂತ್ರಾಂಶ ನಿರ್ವಹಣೆ:**<br><br>ಇ-ಸ್ಯಾಪ್ ತಂತ್ರಾಂಶವನ್ನು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ, ರೈತ ಉತ್ಪಾದಕಾ ಸಂಘದ ಕ್ಷೇತ್ರ ಬಳಕೆದಾರರಿಗೆ ತೋಟಗಾರಿಕೆ ಬೆಳೆಗಳಲ್ಲಿ ಬಳಸಲು ಅನುಕೂಲವಾಗುವಂತೆ ತಂತ್ರಾಂಶ ನಿರ್ವಹಣೆಗಾಗಿ 2019-20 ನೇ ಸಾಲಿಗಾಗಿ ರೂ. 67,00,000/- ಗಳು ತಗಲುವ ವೆಚ್ಚದ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. |

**ಆ) ಸ್ನಾತಕೋತ್ತರ ಮತ್ತು ಪಿ.ಹೆಚ್.ಡಿ. ಪದವಿ ವಿದ್ಯಾರ್ಥಿಗಳ ಪ್ರಬಂಧ (ಥಿಸೀಸ್) ಮೌಲ್ಯಮಾಪನ ಮಾಡುವ ಬಾಹ್ಯ ಪರೀಕ್ಷಕರಿಗೆ ನೀಡುವ ಗೌರವ ಸಂಭಾವನೆ ಮೊತ್ತವನ್ನು ಹೆಚ್ಚಿಸುವ ಕುರಿತು.**

ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ (ಮಾಸರ್ಸ್) ಪ್ರಬಂಧ (ಥಿಸೀಸ್) ಮೌಲ್ಯಮಾಪನ ಮಾಡುವ ಬಾಹ್ಯ ಪರೀಕ್ಷಕರಿಗೆ ನೀಡಲಾಗುತ್ತಿರುವ ರೂ. 500/– ಗಳ ಗೌರವ ಸಂಭಾವನೆಯನ್ನು ರೂ. 1000/– ಗಳಿಗೆ (ಪ್ರತಿ ವಿದ್ಯಾರ್ಥಿಗೆ) ಹೆಚ್ಚಿಸಲು ಮತ್ತು ಪಿ.ಹಚ್.ಡಿ. ವಿದ್ಯಾರ್ಥಿಗಳ ಪ್ರಬಂಧ (ಥಿಸೀಸ್) ಮೌಲ್ಯಮಾಪನ ಮಾಡುವ ಬಾಹ್ಯ ಪರೀಕ್ಷಕರಿಗೆ ನೀಡಲಾಗುತ್ತಿರುವ ರೂ. 800/– ಗಳ ಗೌರವ ಸಂಭಾವನೆಯನ್ನು ರೂ. 1500/– ಗಳಿಗೆ (ಪ್ರತಿ ವಿದ್ಯಾರ್ಥಿಗೆ) ಹೆಚ್ಚಿಸಲು ವಿದ್ಯಾ ವಿಷಯಕ ಪರಿಷತ್ತು ಶಿಫಾರಸ್ಸು ಮಾಡಿದ್ದನ್ನು ಮಂಡಳಿಯು ಅನುಮೋದನೆ ನೀಡಿತು.

**ಇ) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿಗೆ ಹೊರಗಿನಿಂದ ಬಂದ ಬಾಹ್ಯ ಪರೀಕ್ಷಕರು / ತಜ್ಞರು ಅತಿಥಿ ಉಪನ್ಯಾಸ ನೀಡಿದಲ್ಲಿ ಪಾವತಿಸಬೇಕಾದ ಸಂಭಾವನೆ (ಪ್ರಯಾಣ ಭತ್ಯೆ ಹೊರತುಪಡಿಸಿ) ಮೊತ್ತವನ್ನು ಹೆಚ್ಚಿಸುವ ಕುರಿತು.**

ಕೃವಿವಿ ರಾಯಚೂರಿಗೆ ಹೊರಗಿನಿಂದ ಬಂದ ಬಾಹ್ಯ ಪರೀಕ್ಷಕರು / ತಜ್ಞರು ಅತಿಥಿ ಉಪನ್ಯಾಸ ನೀಡಿದಲ್ಲಿ ಪಾವತಿಸಲಾಗುತ್ತಿರುವ ರೂ. 500/– ಗಳ ಗೌರವ ಸಂಭಾವನೆಯನ್ನು ರೂ. 1000/– ಗಳಿಗೆ (ಪ್ರಯಾಣ ಭತ್ಯೆ ಹೊರತುಪಡಿಸಿ) ಹೆಚ್ಚಿಸಲು ವಿದ್ಯಾ ವಿಷಯಕ ಪರಿಷತ್ತು ಶಿಫಾರಸ್ಸು ಮಾಡಿದ್ದನ್ನು ಮಂಡಳಿಯು ಅನುಮೋದನೆ ನೀಡಿತು.

**ಈ) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ನಡೆಸಲಾಗುತ್ತಿರುವ ಡಿಪ್ಲೋಮಾ ಕೋರ್ಸ್‌ಗಳಲ್ಲಿ ಇಂಗ್ಲೀಷ್ ಪಠ್ಯವನ್ನು 2019–20 ನೇ ಸಾಲಿನಿಂದ ಅಳವಡಿಸಿಕೊಳ್ಳುವ ಕುರಿತು**

ವಿಸ್ತೃತ ಚರ್ಚೆಯ ನಂತರ, ಕೃವಿವಿ ರಾಯಚೂರಿನಲ್ಲಿ ನಡೆಸಲಾಗುತ್ತಿರುವ ಡಿಪ್ಲೋಮಾ ಕೋರ್ಸ್‌ನ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಪಠ್ಯಕ್ರಮದ (0+1 ಕ್ರೆಡಿಟ್ ನ) ಎರಡು ಕೋರ್ಸ್‌ಗಳನ್ನು 2019–20 ರಿಂದ ಅನ್ವಯವಾಗುವಂತೆ ಅಳವಡಿಸಿಕೊಳ್ಳುವ ಪ್ರಸ್ತಾವನೆಗೆ ವಿದ್ಯಾ ವಿಷಯಕ ಪರಿಷತ್ತು ಶಿಫಾರಸ್ಸು ಮಾಡಿದ್ದನ್ನು ಮಂಡಳಿಯು ಅನುಮೋದನೆ ನೀಡಿತು.

**(ಕ್ರಮ : ಕುಲಸಚಿವರು)**

**ಐಟಂ–3** **ರಾಯಚೂರು ಕೃವಿವಿ.ಯ 2018–2019 ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2019–2020 ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಅನುಮೋದನೆ ಕುರಿತು**

**ಠರಾವು:**

ಈ ಕೆಳಗೆ ಮಂಡಿಸಿದ ರಾಯಚೂರು ಕೃವಿವಿಯ 2017–18ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2018–19ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಹಣಕಾಸು ಸಮಿತಿಯು ಶಿಫಾರಸ್ಸು ಮಾಡಿರುವುದನ್ನು ಕೃವಿವಿ ಅಧಿನಿಯಮದ ಕಲಂ 13(2)(i) ಹಾಗೂ 39(2) ಅಡಿಯಲ್ಲಿ ಉಪಬಂಧಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.

**II. ರಾಯಚೂರು ಕೃಷಿ ವಿಶ್ವವಿದ್ಯಾಲಯದ 2019–20 ನೇ ಸಾಲಿನ ಅಂದಾಜು ಆಯವ್ಯಯ:**

| ಕ್ರ.ಸಂ | ವಿವರಗಳು | 2019–20 ನೇ ಸಾಲಿನ ಅಂದಾಜು ಆಯವ್ಯಯ (ರೂ.) |
|---|---|---|
| | **ಕೃಷಿ ಸಂಶೋಧನೆ** | |
| 1 | ಆಡಳಿತ ಕಛೇರಿಗಳು | 28,84,88,700.00 |
| 2 | ಕೃಷಿ ಮಹಾವಿದ್ಯಾಲಯಗಳು | 21,78,42,800.00 |
| 3 | ಕೃಷಿ ಸಂಶೋಧನಾ ಕೇಂದ್ರಗಳು | 16,78,55,100.00 |
| 4 | ಕೃಷಿ ವಿಸ್ತರಣಾ ಘಟಕಗಳು | 2,43,13,400.00 |
| | **ಮೊತ್ತ** | **69,85,00,000.00** |
| | **ಸಾಮಾನ್ಯ** | |
| 1 | ಕೃಷಿ ಸಂಶೋಧನೆ (ಸಾಮಾನ್ಯ) | 11,00,00,000.00 |
| 2 | ಕೃಷಿ ಶಿಕ್ಷಣ (ಸಾಮಾನ್ಯ) | 15,58,00,000.00 |
| 3 | ಪರಿಶಿಷ್ಟ ಜಾತಿ ಉಪಯೋಜನೆ (SCP) | 4,66,49,706.00 |
| 4 | ಗಿರಿಜನ ಉಪಯೋಜನೆ (TSP) | 3,26,43,412.00 |
| | **ಮೊತ್ತ** | **34,50,93,118.00** |
| | **ಖಾಯಂ ಯೋಜನೆಗಳು** | |
| 1 | ಅಭಿವೃದ್ಧಿ ಅನುದಾನ (ICAR-SAU) | 6,00,00,000.00 |
| 2 | ಎ.ಐ.ಸಿಆರ್.ಪಿ. ಯೋಜನೆಗಳು | 3,45,34,973.00 |
| 3 | ಕೃಷಿ ವಿಜ್ಞಾನ ಕೇಂದ್ರಗಳು | 10,00,00,000.00 |
| | **ಮೊತ್ತ** | **19,45,34,973.00** |
| | **ಆಡ್ಹಾಕ್ ಯೋಜನೆಗಳು** | |
| 1 | ಆಡ್ಹಾಕ್ ಯೋಜನೆಗಳು | 30,00,00,000.00 |
| | **ಮೊತ್ತ** | **30,00,00,000.00** |
| | **ಇತರೆ ಯೋಜನೆಗಳು (GOK)** | |
| 1 | ಭೂ–ಸ್ವಾಧೀನ (Land Acquisition) | 6,92,78,634.00 |
| 2 | RIDF-20 (ನಬಾರ್ಡ) | 34,35,696.00 |
| 3 | ಪರಿಶಿಷ್ಟ ಜಾತಿ/ಪಂಗಡ (ವಸತಿ ನಿಲಯ ನಿರ್ಮಾಣ) | 0.00 |
| 4 | SCSP and TSP | 0.00 |
| 5 | ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ (RKVY) | 6,00,00,000.00 |
| | **ಮೊತ್ತ** | **13,27,14,330.00** |
| | **ಇತರೆ** | |
| 1 | ಸುಜಾಲಾ III ಯೋಜನೆ | 3,00,00,000.00 |
| 2 | ಡಿ.ಎಸ್.ಟಿ. ಯೋಜನೆ | 40,00,000.00 |
| 3 | ಇ.ಎಫ್.ಟಿ.ಎಲ್. ಯೋಜನೆ | 21,40,000.00 |
| 4 | ಎನ್. ಆರ್. ಐ. ಅನುದಾನ | 5,35,00,000.00 |
| 5 | ಡಿ.ಇ.ಬಿ.ಟಿ. ಮತ್ತು ರಹಸ್ಯ ಖಾತೆ (Suspense Account) | 0.00 |
| 6 | ಆವರ್ತ ನಿಧಿ ಯೋಜನೆಗಳು | 0.00 |
| | **ಮೊತ್ತ** | **8,96,40,000.00** |
| | **ಒಟ್ಟು ಮೊತ್ತ** | **1,76,04,82,421.00** |

(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)

| | |
|---|---|
| ಐಟಂ–8 | ಶ್ರೀ ಎನ್. ವನಮುತ್ರ ರಾಜ ಇವರನ್ನು ಸಹಾಯಕ ಆಡಳಿತಾಧಿಕಾರಿ ಹುದ್ದೆಯಿಂದ ಉಪ–ಆಡಳಿತಾಧಿಕಾರಿ ಹುದ್ದೆಗೆ ಮುಂಬಡ್ತಿ ಕುರಿತು<br><br>**ಠರಾವು:**<br>ಚರ್ಚೆಯ ನಂತರ, ಹೈದ್ರಾಬಾದ್–ಕರ್ನಾಟಕ ಮೀಸಲಾತಿ ನಿಯಮಾವಳಿಗಳನ್ವಯ ವರ್ಗೀಕರಣದ ಅಧಿಸೂಚನೆಯಲ್ಲಿ ಉಪ–ಆಡಳಿತಾಧಿಕಾರಿ ಹುದ್ದೆಯನ್ನು ಸ್ಥಳೀಯ ವೃಂದದ ಮುಂಬಡ್ತಿ ಕಾಲಂನಲ್ಲಿ ಸೇರಿಸಲು ಹಾಗೂ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಪದೋನ್ನತಿ ಆದೇಶ ನೀಡಲು ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ : ಕುಲಸಚಿವರು) |
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು** |
| 1. | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಒಂಭತ್ತನೆಯ ಘಟಿಕೋತ್ಸವದಲ್ಲಿ ಶ್ರೀ ವೇಣು ಎಸ್.ಎ. ಇವರಿಗೆ ಕೃವಿವಿ ಬಂಗಾರದ ಪದಕ ನೀಡಲು ಅನುಮೋದನೆ ಕುರಿತು.**<br><br>**ಠರಾವು :**<br>ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಒಂಭತ್ತನೆಯ ಘಟಿಕೋತ್ಸವದಲ್ಲಿ ಶ್ರೀ ವೇಣು ಎಸ್.ಎ. ಇವರಿಗೆ ಸಂಸ್ಕರಣಾ ಮತ್ತು ಆಹಾರ ತಂತ್ರಜ್ಞಾನ ವಿಭಾಗದಲ್ಲಿ ಕೃವಿವಿ ಬಂಗಾರದ ಪದಕ ನೀಡಲು ಮಂಡಳಿಯು ಅನುಮೋದನೆ ಕುರಿತು.<br>(ಕ್ರಮ : ಕುಲಸಚಿವರು) |
| 2 | ಮಾನ್ಯ ಸದಸ್ಯರಾದ ಶ್ರೀ ವೀರನಗೌಡ ಪರಸರೆಡ್ಡಿ ಮತ್ತು ಶ್ರೀ ಅಮರೇಶ ಬಲ್ಲಿದವ ಇವರುಗಳು ನಾಲವಾರ ಮತ್ತು ದೇವದುರ್ಗದಲ್ಲಿ ಕೃಷಿ ವಿಸ್ತರಣಾ ಶಿಕ್ಷಣಾ ಕೇಂದ್ರಗಳನ್ನು ಹಾಗೂ ದೇವದುರ್ಗದಲ್ಲಿ ಮೆಣಸಿನಕಾಯಿ ಬೇಸಾಯದಲ್ಲಿ ಕೃಷಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಕುರಿತು ಮಾಹಿತಿ ಕೋರಿದರು.<br><br>**ಠರಾವು :**<br>ಹೊಸದಾಗಿ ನಾಲವಾರ ಮತ್ತು ದೇವದುರ್ಗದಲ್ಲಿ ಕೃಷಿ ವಿಸ್ತರಣಾ ಶಿಕ್ಷಣಾ ಕೇಂದ್ರಗಳನ್ನು ಹಾಗೂ ದೇವದುರ್ಗದಲ್ಲಿ ಮೆಣಸಿನಕಾಯಿ ಬೇಸಾಯದಲ್ಲಿ ಕೃಷಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಸಲುವಾಗಿ ಅವಶ್ಯಕವಿರುವ ಭೂಮಿ, ಅನುದಾನ ಹಾಗೂ ಮಾನವ ಸಂಪನ್ಮೂಲಗಳ ಲಭ್ಯತೆಯ ಕುರಿತು ವಿವರವಾದ ವರದಿಯನ್ನು ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ನಿರ್ದೇಶಕರು, ಕೃವಿವಿ ರಾಯಚೂರು ಇವರಿಂದ ಪಡೆಯಲು ನಿರ್ಣಯಿಸಲಾಯಿತು.<br>**(ಕ್ರಮ : ಸಂಶೋಧನಾ ನಿರ್ದೇಶಕರು / ವಿಸ್ತರಣಾ ನಿರ್ದೇಶಕರು)** |

40

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /– 20–7–2019 | ಸಹಿ /– 20–7–2019 |
|---|---|
| **(ಕೆ.ಎನ್. ಕಟ್ಟಿಮನಿ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಎಂ.ಜಿ. ಪಾಟೀಲ)**<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಎಂ.ಜಿ. ಪಾಟೀಲ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

ಕುಲಸಚಿವರು
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ
ರಾಯಚೂರು–584 104